**<u>ದಿನಾಂಕಃ 29-05-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಎಂ.ಸಿ.ಹೆಚ್., 1 ರಿಂದ 3 ಹಾಗೂ 5 ರಿಂದ 9 ನೇ ಪ್ರತಿವಾದಿ ಪರ ವಕೀಲರಿಂದಃ</u>**

**<u>1.</u>** ದಾವೆ ಬರೆಯಲು ನಾನು ಮಾತ್ರ ಮಾಹಿತಿ ನೀಡಿದ್ದು, 1 ಮತ್ತು 2 ನೇ ವಾದಿಯರು ಮಾಹಿತಿ ನೀಡಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ.

**2**. ಮೂಲ ಪುರುಷ ಸಿದ್ದಪ್ಪ ಈತನ ತಂದೆಯ ಹೆಸರು ಡಿಳ್ಳೆಪ್ಪ ಅಂದರೆ ಸರಿ. ಡಿಳ್ಳೆಪ್ಪನ ಈತನ ತಂದೆಯ ಹೆಸರು ದುರ್ಗಪ್ಪ ವಾಲೀಕಾರ ಅಂದರೆ ಸರಿ. ದುರ್ಗಪ್ಪ ಇತನಿಗೆ ದುರ್ಗಪ್ಪ ಹಾಗೂ ಡಿಳ್ಳೆಪ್ಪ ಅಂತಾ ಇಬ್ಬರೂ ಮಕ್ಕಳು ಅಂದರೆ ಸರಿ. ಡಿಳ್ಳೆಪ್ಪನ ಹೆಂಡತಿ ಅಂದರೆ ನನ್ನ ಅಜ್ಜಿ ಪುಟ್ಟವ್ವ ಅಂದರೆ ಸರಿ. ಅದೇ ರೀತಿ ದುರ್ಗಪ್ಪ ಈತನ ಹೆಂಡತಿ ನೀಲವ್ವ ಅಂದರೆ ಸರಿ. ನನ್ನ ಅಜ್ಜ-ಅಜ್ಜಗೆ ನನ್ನ ತಂದೆ ಸಿದ್ದಪ್ಪ, ಫಕ್ಕೀರವ್ವ, ಬಸಪ್ಪ, ಹನುಮಪ್ಪ, ಗಂಗವ್ವ ಅಂತಾ ಮಕ್ಕಳು ಅಂದರೆ ಸರಿ. ಈ ಪ್ರಕರಣದಲ್ಲಿ ನನ್ನ ತಂದೆಯ ಸಹೋದರ ಹಾಗೂ ಸಹೋದರಿಯರಾದ ಫಕ್ಕೀರವ್ವ, ಬಸಪ್ಪ, ಹನುಮಪ್ಪ ಹಾಗೂ ಗಂಗವ್ವ ಇವಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ.

**3.** ನನ್ನ ತಂದೆಗೆ ನಾನು, ಕರಿಯಪ್ಪ, ಭರಮಪ್ಪ, ನಿಂಗವ್ವ ಅಂತಾ ಮಕ್ಕಳು ಅಂದರೆ ಸರಿ. ಭರಮಪ್ಪನನ್ನು ದಿನಾಂಕಃ 28-10-1981 ರಂದು ದುರ್ಗಪ್ಪ ಈತನಿಗೆ ದತ್ತಕ ನೀಡಿರುತ್ತಾರೆ ಅಂದರೆ ಸರಿ. ದಿನಾಂಕಃ05-11-1981 ರಂದು ದತ್ತಕ ಪತ್ರ ನೋಂದಣಿಯಾಗಿರುತ್ತದೆ ಅಂದರೆ ಸರಿ. ಪ್ರತಿವಾದ ಪತ್ರದ ಶೆಡ್ಯೂಲ್- ಎ ನಲ್ಲಿ ಬರೆದ ವಂಶಾವಳಿ ಸರಿ ಇರುತ್ತದೆ.

**4.** ನನ್ನ ದಾವೆಯಲ್ಲಿ ಹಾಗೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನನ್ನ ಸಹೋದರನಾದ ಭರಮಪ್ಪ ಈತನನ್ನು ದುರ್ಗಪ್ಪ ಈತನಿಗೆ 1981 ರಲ್ಲಿ ದತ್ತಕ ನೀಡಿದ ಬಗ್ಗೆ ಬರೆಸಿಲ್ಲ. ಅದೇ ರೀತಿ ವಾದ ಪತ್ರದೊಂದಿಗೆ ಹಾಜರುಪಡಿಸಿದ ವಂಶವೃಕ್ಷದಲ್ಲಿಯೂ ಸಹ ಭರಮಪ್ಪ ಈತನನ್ನು ದತ್ತಕ ನೀಡಿರುತ್ತೇವೆ ಅಂತಾ ತೋರಿಸಿಲ್ಲ ಅಂದರೆ ಸರಿ. ವಾದ ಪತ್ರದಲ್ಲಿ ಭರಮಪ್ಪ ಈತನನ್ನು ದತ್ತಕ ನೀಡಿದ ಬಗ್ಗೆ ಬರೆಸಿಲ್ಲ, ಹೀಗಾಗಿ ಸದರಿ ವಂಶವೃಕ್ಷ ತಪ್ಪು ಇದೆ ಅಂದರೆ ಸರಿ.

**5.** ದಾವಾದ **ಶೆಡ್ಯೂಲ್-ಅ** ದಲ್ಲಿರುವ ಆಸ್ತಿಗಳು ಮೂಲಪುರುಷ ದುರ್ಗಪ್ಪ ಈತನಿಗೆ ಯಾವ ರೀತಿ ಬಂದಿರುತ್ತವೆ ಅಂತಾ ಬರೆಸಿಲ್ಲ ಅಂದರೆ ಸಾಕ್ಷಿ ಅದರ ಬಗ್ಗೆ ಮಾಹಿತಿ ಇಲ್ಲಾ ಅಂತಾ ಹೇಳುತ್ತಾರೆ.

**6**. ದಾವಾ ಆಸ್ತಿಯಲ್ಲಿ ಹಿಸ್ಸೆ ಕೊಡುವಂತೆ 4 ವರ್ಷಗಳ ಹಿಂದೆ ನಾನು ಹಾಗೂ ಉಳಿದ ವಾದಿಯರು ಸೇರಿ ಕರಿಯಪ್ಪ ಹಾಗೂ ಭರಮಪ್ಪ ಈತನನ್ನು ಪಾಲು ಕೊಡುವಂತೆ ಕೇಳಿರುತ್ತೇವೆ. ಭರಮಪ್ಪ 3 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಕರಿಯಪ್ಪ ಈತ 3 ವರೆ ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. 3-4 ವರ್ಷಗಳ ಹಿಂದೆ ಕರಿಯಪ್ಪ ಹಾಗೂ ಭರಮಪ್ಪ ತೀರಿಕೊಂಡಿದ್ದರಿಂದ ನಾನು ಯಾರ ಬಳಿಯೂ ಪಾಲು ಕೇಳಿಲ್ಲ ಅಂದರೆ ಸುಳ್ಳು.

**7.** 1946 ನೇ ಇಸ್ವಿಯಲ್ಲಿ ದುರ್ಗಪ್ಪ ದುರ್ಗಪ್ಪ ವಾಲೀಕಾರ ಇತನಿಗೆ ರಿ.ಸ.ನಂ. 14/1, 08 ಎಕರೆ 26 ಗುಂಟೆ, ರಿ.ಸ.ನಂ. 2/3, 01 ಎಕರೆ 36 ಗುಂಟೆ ಇವರಿಗೆ ಬಂದಿರುತ್ತವೆ ಅಂದರೆ ಸರಿ. ಅದೇ ರೀತಿ ನನ್ನ ಅಜ್ಜನಾದ ಡಿಳ್ಳೆಪ್ಪ ಇವರಿಗೆ ರಿ.ಸ.ನಂ. 14/2, 08 ಎಕರೆ 26 ಗುಂಟೆ, ರಿ.ಸ.ನಂ. 2/4 ರಲ್ಲಿ 02

ಎಕರೆ, ರಿ.ಸ.ನಂ. 82, 04 ಎಕರೆ 31 ಗುಂಟೆ ಜಮೀನುಗಳು ಬಂದಿರುತ್ತವೆ ಅಂದರೆ ಸರಿ. ಇದರ ಬಗ್ಗೆ ಡ ನಂಬರ 350 ಸಹ ಮಂಜೂರಾಗಿರುತ್ತದೆ ಅಂದರೆ ಸರಿ.

**8.** 1984 ನೇ ಇಸ್ವಿಯಲ್ಲಿ ಡಿಳ್ಳೆಪ್ಪನ ಮಕ್ಕಳಾದ ಫಕ್ಕೀರಪ್ಪ, ಸಿದ್ದಪ್ಪ, ಹನುಮಪ್ಪ ಇವರು ಆಸ್ತಿಗಳಲ್ಲಿ ಪಾಲು ಮಾಡಿಕೊಂಡಿರುತ್ತಾರೆ ಅಂದರೆ ಸರಿ. ಆಗ ಸಿದ್ದಪ್ಪ ಈತನಿಗೆ ರಿ,ಸ.ನಂ. 06/1 ಎ, ಕ್ಷೇತ್ರ 03 ಎಕರೆ, ರಿ.ಸ.ನಂ. 2/3+4 ಕ್ಷೇತ್ರ 05 ಎಕರೆ 10 ಗುಂಟೆ, ರಿ.ಸ.ನಂ. 82, ಕ್ಷೇತ್ರ 04 ಎಕರೆ 31 ಗುಂಟೆ ಬಂದಿರುತ್ತದೆ ಅಂದರೆ ಸರಿ. ಅದರ ಬಗ್ಗೆ ಡ ನಂಬರ 1841 ಮಂಜೂರಾಗಿರುತ್ತದೆ ಅಂದರೆ ಸರಿ.

**9.** ದುರ್ಗಪ್ಪ ತೀರಿಕೊಂಡ ನಂತರ ಆತನ ದತ್ತಕನ ಮಗನಾದ ಭರಮಪ್ಪ ಈತನಿಗೆ ರಿ.ಸ.ನಂ. 14/1, ಕ್ಷೇತ್ರ 08 ಎಕರೆ 26 ಗುಂಟೆ, ರಿ.ಸ.ನಂ. 2/3, 01 ಎಕರೆ 34 ಗುಂಟೆ ಬಂತು ಅಂದರೆ ಸರಿ. ದುರ್ಗಪ್ಪ ಈತನ ಆಸ್ತಿಯನ್ನು ಆತನ ದತ್ತಕ ಮಗನಾದ ಭರಮಪ್ಪ ಸಾಗ ಮಾಡುತ್ತಾ ಬಂದಿದ್ದಾ ಅಂದರೆ ಸರಿ. ಕರಿಯಪ್ಪ ಹಾಗೂ ಭರಮಪ್ಪ ಇವರು ಸಾಗ ಮಾಡಲು ಅನುಕೂಲ ಮಾಡುವ ಕುರಿತು ಹಿಸ್ಸಾ ಮಾಡಿಕೊಂಡಿರುತ್ತಾರೆ ಅಂದರೆ ಸರಿ. ರಿ.ಸ.ನಂ. 14/1 ರಲ್ಲಿ 04 ಎಕರೆ 08 ಗುಂಟೆಯನ್ನು ಭರಮಪ್ಪ ಈತ ಕರಿಯಪ್ಪನಿಗೆ ಬಿಟ್ಟು ಕೊಟ್ಟಿರುತ್ತಾರೆ ಅಂದರೆ ಸರಿ. ಅದೇ ರೀತಿ ರಿ,ಸ.ನಂ. 2/3+4 ರಲ್ಲಿ 02 ಎಕರೆ 15 ಗುಂಟೆ ಜಮೀನನ್ನು ಕರಿಯಪ್ಪ ಈತನಿಗೆ ಬಿಟ್ಟು ಕೊಟ್ಟಿರುತ್ತಾನೆ ಅಂದರೆ ಸರಿ. ಭರಮಪ್ಪ ಈತ ಸರ್ವೆ ನಂಬರ 14/1, 04 ಎಕರೆ 08 ಗುಂಟೆ, 6/1 ರಲ್ಲಿ 01 ಎಕರೆ 20 ಗುಂಟೆ, 2/3+4 ರಲ್ಲಿ 02 ಎಕರೆ 15 ಗುಂಟೆ ಸಾಗ ಮಾಡುತ್ತಿದ್ದಾನೆ ಅಂದರೆ ಸರಿ. ಅದರ ಕುರಿತಂತೆ 3223 ದಾಖಲಾಗಿರುತ್ತದೆ ಅಂದರೆ ಸರಿ.ಆ ಪ್ರಕಾರ ಆವತ್ತಿನಿಂದ ಇವತ್ತಿನವರೆಗೂ ಸಾಗ ಮಾಡುತ್ತಿದ್ದಾರೆ ಅಂದರೆ ಸರಿ.

**10.** 1 ಎಕರೆ 20 ಗುಂಟೆ ಜಮೀನನ್ನು ನಿಂಗಪ್ಪ ಕತ್ತಿ ಇವರಿಗೆ ಮಾರಾಟ ಮಾಡಿರುತ್ತಾರೆ ಅಂದರೆ ಸಾಕ್ಷಿ ನನ್ನ ತಂದೆ ಇರುವ ಕಾಲಕ್ಕೆ ಮಾರಾಟ ಮಾಡಿರುತ್ತಾರೆ ಅಂತಾ ಹೇಳುತ್ತಾರೆ. ಸದರಿ ಜಮೀನು ನಿಂಗಪ್ಪ ಕತ್ತಿ ಇವರ ಕಬ್ಜೆಯಲ್ಲಿ ಇರುತ್ತದೆ ಅಂದರೆ ಸರಿ. ಈಗ ಕರಿಯಪ್ಪ ಹಾಗೂ ಭರಮಪ್ಪ ಇವರು ತಮ್ಮ ತಮ್ಮ ಬಂದ ಹಿಸ್ಸೆ ಜಮೀನಿನಲ್ಲಿ ಬೋರವೆಲ್ ಹಾಕಿ ರೇಷ್ಮೆ ಗೂಡಿನ ಮನೆ ಸಹ ಕಟ್ಟಿಸಿರುತ್ತಾರೆ ಅಂದರೆ ಸಾಕ್ಷಿ ಜಮೀನಿನಿಂದ ಬಂದ ಉತ್ಪನ್ನದಲ್ಲಿ ಕಟ್ಟಿಸಿರುತ್ತಾರೆ ಅಂತಾ ಹೇಳುತ್ತಾರೆ. ಮನೆ ಕಟ್ಟಿಸಿ ಸುಮಾರು 10-15 ವರ್ಷ ಆಗಿರಬಹುದು ಅಂದರೆ ಸರಿ. ಪ್ರತ್ಯೇಕವಾಗಿ ಹಿಸ್ಸೆ ಮಾಡಿಕೊಂಡು ಜಮೀನು ಮಾಡಲು ಪ್ರಾರಂಭಿಸಿ 20-25 ವರ್ಷ ಆಗಿರಬಹುದು ಅಂದರೆ ಸರಿ.

**11.** ಭರಮಪ್ಪ ತನಗೆ ಬಂದ ಆಸ್ತಿಯಾದ 08 ಎಕರೆ 26 ಗುಂಟೆಯಲ್ಲಿ 04 ಎಕರೆ 28 ಗುಂಟೆ ಜಮೀನನ್ನು ಕರಿಯಪ್ಪನಿಗೆ ಬಿಟ್ಟುಕೊಟ್ಟಿರುತ್ತಾನೆ ಅಂದರೆ ಸರಿ. ಅದೇ ರೀತಿ ಕರಿಯಪ್ಪ ಈತ ರಿ,ಸ.ನಂ. 6/1 ರಲ್ಲಿ 03 ಎಕರೆಯಲ್ಲಿ 01 ಎಕರೆ 20 ಗುಂಟೆ ಭರಮಪ್ಪನಿಗೆ ಬಿಟ್ಟುಕೊಟ್ಟಿರುತ್ತಾನೆ ಅಂದರೆ ಸರಿ. ಅದೇ ರೀತಿ ರಿ.ಸ.ನಂ. 2/3+4 ರಲ್ಲಿ ಒಟ್ಟು ಕ್ಷೇತ್ರ 05 ಎಕರೆ 10 ಗುಂಟೆಯಲ್ಲಿ 02 ಎಕರೆ 15 ಗುಂಟೆಯನ್ನು ಕರಿಯಪ್ಪ ಈತನು ಭರಮಪ್ಪನಿಗೆ ಬಿಟ್ಟುಕೊಟ್ಟಿರುತ್ತಾನೆ ಅಂದರೆ ಸರಿ. ಸದರಿ ಹಿಸ್ಸೆಯು ನನ್ನ ತಂದೆಯ ಜೀವಿತ ಕಾಲದಲ್ಲಿ ಆಗಿರುತ್ತದೆ ಅಂದರೆ ಸರಿ. ನನ್ನ ಹಾಗೂ 2 ನೇ ವಾದಿಯ ಮದುವೆ ಕಾಲಕ್ಕೆ 1 ಎಕರೆ 20 ಗುಂಟೆ ಜಮೀನು ಮಾರಾಟ ಮಾಡಿ ಬಂದ ಹಣವನ್ನು ಮದುವೆಯ ವರೋಪಚಾರಕ್ಕಾಗಿ ಖರ್ಚು ಮಾಡಿರುತ್ತಾರೆ ಅಂದರೆ ಸುಳ್ಳು.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ- **29-05-2024**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.